ಅ) ಮೇಲಿನ ಉತ್ತರವೇ ಇದಕ್ಕೂ ಅನ್ವಯಿಸುತ್ತದೆ.

ಇ) ನ್ಯಾಯಾಲಯಗಳಿಂದ ತಡೆಯಾಜ್ಞೆ ಬಂದಿರುವ ಪ್ರದೇಶಗಳ ವಿನ: ಉಳಿದೆಲ್ಲ ಕಡೆ ಈ ವದ್ಧತಿ ನಿರ್ಮೂಲಗೊಳಿಸಲಾಗಿದೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸಬಹುದಾದ ಪಟ್ಟಿಯನ್ನು ಸಭೆಯ ಪರಿಶೀಲನೆಗೆ ಇಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ಮೈಸೂರು ನಗರದಲ್ಲಿರುವ ಗೋಕುಲಂ ನ್ಯಾಸ ಎಂಬುದರ ಬಗ್ಗೆ.

೧೯೦೧. ಶ್ರೀ ಜಿ. ರಾಜೂಗೌಡ (ಹನೂರು).— ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗೋಕುಲಂ ನ್ಯಾಸ ಎಂಬುದೊಂದು ಮೈಸೂರು ನಗರದಲ್ಲಿದೆಯೆ ?

ಆ) ಮೈಸೂರು ನಗರಾಭಿವೃದ್ಧಿ ಮಂಡಳಿಯಿಂದ ಈ ನ್ಯಾಸಕ್ಕೆ ಎಷ್ಟು ಎಕರೆ ಭೂಮಿ, ಯಾವಾಗ, ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಿದಾರೆ ಹಾಗೂ ಇದರ ಬೆಲೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ಸಭೆಯ ತೀರ್ಮಾನದ ನಂ. ೧೧೯೫ ದಿನಾಂಕ ೪-೨-೮೪ರ ಪ್ರಕಾರ ಮೈಸೂರಿನ ಮಾರಗೌಡನ ಹಳ್ಳಿ ಗ್ರಾಮದ ಸರ್ವೆ ನಂ. ೭, ೯ ಮತ್ತು ೮ರಲ್ಲಿ ಭಾಗಶಃ (ಕವಂವಾಗಿ ೫.೩೬ ಎಕರೆ, ೨.೩೦ ಎಕರೆ ಹಾಗೂ ೨.೦೦ ಎಕರೆ) ಒಟ್ಟು ೧೦ ಎಕರೆ ೨೬ ಗುಂಟೆ ಪ್ರದೇಶದಷ್ಟು ಜಾಗವನ್ನು ಕಲ್ಯಾಣ ಮಂಟಪ ಕಟ್ಟಲು ಮೂಲ ಬೆಲೆಗೆ ತಾತ್ಕಾಲಿಕ ಬೆಲೆ ರೂ. ೨,೨೬,೬೪೪.೫೦ ನಿಗದಿ ಪಡಿಸಿ ಮಂಜೂರು ಮಾಡಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಲೈಲ್ಯಾಂಡ್ ಬಸ್ಸುಗಳ ಬಿಡಿ ಭಾಗಗಳ ಬಗ್ಗೆ.

೧೯೪೩. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಲೈಲ್ಯಾಂಡ್ ಬಸ್ಸುಗಳಿಗೆ ಬಿಡಿ ಭಾಗಗಳನ್ನು ಯಾರ ಮೂಲಕ ಹಾಗೂ ಯಾವ ವಿಧಾನದಲ್ಲಿ ಖರೀದಿಸಲಾಗುತ್ತಿದೆ ?

ಆ) ಲೈಲ್ಯಾಂಡ್ ಕಂಪನಿಯಿಂದ ನೇರ ಖರೀದಿ ಸಾಧ್ಯವಿಲ್ಲವೆ ?

ಶ್ರೀ ಟಿ. ಜಿ. ಆರ್. ಸಿಂಧ್ಯ (ಮಾನ್ಯ ವಸತಿ ಹಾಗೂ ಸಾರಿಗೆ ರಾಜ್ಯ ಸಚಿವರು).—

ಅ) ಮತ್ತು ಆ) ಲೈಲ್ಯಾಂಡ್ ಬಸ್ಸುಗಳಿಗೆ ಬೇಕಾಗುವ ಬಿಡಿ ಭಾಗಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೆಳಕಂಡ ಮೂಲಗಳಿಂದ ಖರೀದಿಸಲಾಗುತ್ತಿದೆ.

೧) ಮೆ. ಅಶೋಕ ಲೈಲ್ಯಾಂಡ್ ಲಿ.

೨) ಮೆ. ಅಶೋಕ ಲೈಲ್ಯಾಂಡ್ ಕಂ. ಯವರಿಗೆ ಮೂಲ ಜೋಡಣೆಗಾಗಿ ಸರಬರಾಜು ಮಾಡುವ ಸಂಸ್ಥೆಗಳು.

೩) ಕ್ರಯ ಒಪ್ಪಂದದ ಸರಬರಾಜುದಾರರು.

೪) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅನುಷಂಗಿಕ ಸಂಸ್ಥೆಗಳು.